ಓ.ಎಸ್. ನಂಃ **25/2019**
<u>**ಪಿಡಬ್ಲ್ಯೂಃ 1**</u>

ದಿನಾಂಕಃ 07-08-2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ **1** ಎ ರಿಂದ **1** ಡಿ ನೇ ಪ್ರತಿವಾದಿಯ ಪರ ಶ್ರೀ ಎಂ ಎಂ ಈ ವಕೀಲರಿಂದಃ</u>

ಯಾಕೂಬ್ ಸಾಬ್ ನನ್ನ ಮಾವ ಅಂದರೆ ನನ್ನ ಗಂಡನ ತಂದೆಯಾಗಿದ್ದರು. ನನ್ನ ಮಾವನಿಗೆ ಒಟ್ಟು ಮೂರು ಜನ ಗಂಡು ಹಾಗೂ ಮೂರು ಜನ ಹೆಣ್ಣು ಮಕ್ಕಳು ಇದ್ದಾರೆ. ಅಪ್ಸರಮಿಯಾ, ಗೌಸುದ್ದೀನ್, ಜಿಲಾನಿ, ಪುತಲಿಬೇಗಂ, ಗೌಸಿಯಾ ಹಾಗೂ ರಜಿಯಾ ಬೇಗಂ ರವರು ನನ್ನ ಮಾವನ ಆರು ಜನ ಮಕ್ಕಳಾಗಿದ್ದು, ಆ ಪೈಕಿ ಪುತಲಿಬೇಗಂ ರವರು ಮರಣಹೊಂದಿರುತ್ತಾರೆ. ಉಳಿದ ಇಬ್ಬರು ಹೆಣ್ಣು ಮಕ್ಕಳು ತಮ್ಮ ತಮ್ಮ ಗಂಡಂದಿರ ಮನೆಯಲ್ಲಿ ಇದ್ದಾರೆ. ಸದರಿ ಇಬ್ಬರು ಹೆಣ್ಣು ಮಕ್ಕಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ.

2. ನನ್ನ ಗಂಡನ ಮೊದಲ ಹೆಂಡತಿ ಹೆಸರು ಗೋರಿಬಿ ಎಂದು ಇತ್ತು. ನನ್ನ ಗಂಡ ಹಾಗೂ ಸದರಿ ಗೋರಿಬಿ ರವರಿಗೆ ಒಬ್ಬ ಮಗ ಹಾಗೂ ಇಬ್ಬರು ಹೆಣ್ಣು ಮಕ್ಕಳು ಇದ್ದಾರೆ. ಮಗನ ಹೆಸರು ಕೌಸರ್, ಚಿಕ್ಕ ಮಗಳ ಹೆಸರು ಬೇಬಿ ಎಂದು ಇರುತ್ತದೆ. ಆದರೆ ಹಿರಿಯ ಮಗಳ ಹೆಸರು ನನಗೆ ನೆನಪಿಗೆ ಬರುತ್ತಿಲ್ಲ. ಸದರಿ ಇಬ್ಬರು ಹೆಣ್ಣು ಮಕ್ಕಳು ಮುಂಬೈ ನಲ್ಲಿ ವಾಸವಾಗಿದ್ದಾರೆ. ಅವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ.

3. 1 ಮತ್ತು 2 ನೇ ಪ್ರತಿವಾದಿಯರು ನನ್ನ ಮೈದುನರಾಗಿರುತ್ತಾರೆ ಎಂದರೆ ಸರಿ. 4 ನೇ ಪ್ರತಿವಾದಿ 2 ನೇ ಪ್ರತಿವಾದಿಯ ಹೆಂಡತಿ ಆಗಿರುತ್ತಾರೆ ಎಂದರೆ ಸಾಕ್ಷಿಯು 2 ನೇ ಹೆಂಡತಿ ಆಗಿರುತ್ತಾರೆ ಎಂದು ನುಡಿಯುತ್ತಾರೆ. 2 ನೇ ಪ್ರತಿವಾದಿಯ ಮೊದಲನೆ ಹೆಂಡತಿ ಮರಣಹೊಂದಿದ್ದು, ಅವರಿಗೆ ಒಬ್ಬ ಮಗ ಇದ್ದು ಆತನ ಹೆಸರು ರಿಜ್ವಾನ್ ಎಂದು ಇರುತ್ತದೆ. ಆತ ಸಹ ಮುಂಬೈನಲ್ಲಿ ಇರುತ್ತಾನೆ. ಆತನನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ.

4. ನನಗೆ ಮೂರು ಜನ ಗಂಡು ಹಾಗೂ ಮೂರು ಜನ ಹೆಣ್ಣು ಮಕ್ಕಳು ಇದ್ದಾರೆ ಎಂದರೆ ಸರಿ. 2 ನೇ ವಾದಿ ನನ್ನ ಮಗ ಆಗಿರುತ್ತಾನೆ ಎಂದರೆ ಸರಿ. ನನ್ನ ಉಳಿದ 05 ಜನ ಮಕ್ಕಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ದಾವಾ ಮನೆಗಳು ಯಾವ ವರ್ಷದಲ್ಲಿ ಯಾಕೂಬ್ ಸಾಬ್ ರವರ ಹೆಸರಿನಲ್ಲಿ ಇದ್ದವು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಯಾಕೂಬ್ ಸಾಬ್ ಈಗ 20 ವರುಷಗಳ ಹಿಂದೆ ಮರಣಹೊಂದಿದ್ದಾನೆ. ಆತನ ಹೆಂಡತಿ ದಾವಾ ಆಸ್ತಿಯನ್ನು ತನ್ನ ಹೆಸರಿಗೆ ಯಾವ ವರ್ಷದಲ್ಲಿ ವರ್ಗಾವಣೆ ಮಾಡಿಕೊಂಡಿದ್ದರು ಎಂಬುದು ನನಗೆ ನೆನಪಿಲ್ಲ. ದಾವಾ ಮನೆಗಳ ಆಸ್ತಿ ಸಂಖ್ಯೆಗಳು ನನಗೆ ನೆನಪಿಲ್ಲ. ಎರಡು ಮನೆಗಳು

ಸೇರಿದಂತೆ ಒಟ್ಟು ನಾಲ್ಕು ಕೋಣೆಗಳು ಇದ್ದಾವೆ, ಎರಡು ಮನೆಯ ನಡುವೆ ಒಂದು ಗೋಡೆ ಮಾತ್ರ ಇದೆ.

5. ನಿಮ್ಮ ಮಾವ ಯಾಕೂಬ್ ಸಾಬ್ 1990 ರಲ್ಲಿ ಮರಣಹೊಂದಿದ್ದಾರೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ಆತ ಜೀವಂತ ಇದ್ದಾಗ ಎಲ್ಲಾ ಹಬ್ಬಗಳನ್ನು ಆತನೊಂದಿಗೆ ಆಚರಣೆ ಮಾಡಿರುತ್ತೀರಿ ಎಂದರೆ ಸಾಕ್ಷಿಯು ನಾವು ಬಾಡಿಗೆ ಮನೆಯಲ್ಲಿ ವಾಸವಾಗಿದ್ದಾಗ ಪ್ರತ್ಯೇಕವಾಗಿ ಆಚರಣೆ ಮಾಡುತ್ತಿದ್ದೆವು ಎಂದು ನುಡಿಯುತ್ತಾರೆ. ನನ್ನ ಮಾವ ತನ್ನ ಅಣ್ಣ-ತಮ್ಮಂದಿರು ಮತ್ತು ಸಂಬಂಧಿಕರನ್ನು ಹಬ್ಬದ ದಿನಗಳಲ್ಲಿ ಕರೆಯುತ್ತಿದ್ದರು ಎಂದರೆ ಸರಿ. ಮಹ್ಮದ್ ಶಪೀ ಎಂಬುವವರು ನನ್ನ ಮಾವನ ದೊಡ್ಡಪ್ಪ-ಚಿಕ್ಕಪ್ಪನ ಮಗ ಆಗಿರುತ್ತಾರೆ. ಸದರಿ ಮೊಹ್ಮದ್ ಶಪೀ ನಜದಾರಿ ರವರು ಎಲ್ಲಾ ಹಬ್ಬಗಳನ್ನು ನನ್ನ ಮಾವನೊಂದಿಗೆ ಆಚರಣೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

6. ದಿನಾಂಕ 18.05.1988 ರಂದು ರಂಜಾನ್ ಹಬ್ಬ ಇತ್ತು ಎಂದರೆ ಸಾಕ್ಷಿಯ ಸರಿ ಎಂದು ನುಡಿಯುತ್ತಾರೆ. ನಾವು ಹಾಗೂ ಸದರಿ ಮಹ್ಮದ್ ಶಪೀ ಎಲ್ಲರು ಸೇರಿ ಹಬ್ಬ ಆಚರಣೆ ಮಾಡಿದ್ದೆವು ಎಂದರೆ ಸರಿಯಲ್ಲ. ನಾವೆಲ್ಲ ಸೇರಿ ಸದರಿ ಹಬ್ಬ ಆಚರಣೆ ಮಾಡುವಾಗ ನನ್ನ ಮಾವ ದಾವಾ ಅನುಸೂಚಿ 2 ನೇ ಮನೆಯನ್ನು 1 ನೇ ಪ್ರತಿವಾದಿಗೆ ಮೌಖಿಕ ದಾನದ ರೂಪದಲ್ಲಿ ನೀಡಿರುತ್ತಾರೆ ಎಂದರೆ ಸರಿಯಲ್ಲ. ದಾನ ಮಾಡಿರುವುದು ನನಗೆ ಗೊತ್ತಿದ್ದರೂ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಮಾವ ದಾನ ಮಾಡಿರುವುದರಿಂದ ನಮಗೆ ಸದರಿ ಆಸ್ತಿಯಲ್ಲಿ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

(5 ನೇ ಪ್ರತಿವಾದಿ ಗೈರು ಹಾಜರು ಇದ್ದು ಅವರ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಕಾರಣ ಇಲ್ಲದಿರುವುದರಿಂದ ಸಮಯ ನಿರಾಕರಿಸಿ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಗಿದೆ.)

ಮರು ವಿಚಾರಣೆ ಇಲ್ಲ.

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು ಯಾದಗಿರಿ

ಓ.ಎಸ್. ನಂಃ **25/2019**

<u>ಪಿಡಬ್ಲ್ಯೂಃ 2</u>

ದಿನಾಂಕಃ 07-08-2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ **1** ಎ ರಿಂದ **1** ಡಿ ನೇ ಪ್ರತಿವಾದಿಯ ಪರ ಶ್ರೀ ಎಂ ಎಂ ಈ ವಕೀಲರಿಂದಃ</u>

ಒಂದು ದಾವಾ ಆಸ್ತಿಯ ಸಂಖ್ಯೆ 3-1-71 ಹಾಗೂ 76 ಇರುತ್ತದೆ, ಇನ್ನೊಂದು ಆಸ್ತಿಯ ಸಂಖ್ಯೆ 3-1-90 ಇರಬಹುದು. ನನಗೆ ದಾವಾ ಮನೆಗಳ ವಿಸ್ತೀರ್ಣ ಗೊತ್ತಿಲ್ಲ. ಎರಡು ಮನೆಗಳಲ್ಲಿ ತಲಾ ಮೂರು ಕೋಣೆಗಳು ಇದ್ದಾವೆ. ಮಹ್ಮದ್ ಯಾಕೂಬ್ ಸಾಬ್ ನನ್ನ ಮಾವ ಆಗಿದ್ದರು. ಮಹ್ಮದ್ ಯಾಕೂಬ್ ಸಾಬ್ ರವರು ಎಲ್ಲಾ ಹಬ್ಬಗಳಲ್ಲಿ ನನ್ನನ್ನು ಕರೆಯುತ್ತಿದ್ದರು ಎಂದರೆ ಸರಿ. ಅದೇ ರೀತಿ ಮಹ್ಮದ್ ಶಪೀ ರವರನ್ನು ಸಹ ಕರೆಯುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ನಾನು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಮಹ್ಮದ್ ಯಾಕೂಬ್ ಸಾಬ್ ತೀರಿಕೊಂಡು ಈಗ 15 ವರ್ಷ ಮೇಲ್ಪಟ್ಟು ಆಗಿರುತ್ತದೆ. ಅವರು 1990 ರಲ್ಲಿ ಮರಣಹೊಂದಿದ್ದಾರೆ ಎಂದರೆ ಸರಿ.

2. ದಿನಾಂಕ 18.05.1988 ರಂದು ರಂಜಾನ್ ಹಬ್ಬ ಆಚರಣೆಗಾಗಿ ವಾದಿಯರು, ಮಹ್ಮದ್ ಯಾಕೂಬ್ ಸಾಬ್ ಹಾಗೂ ಮಹ್ಮದ್ ಶಪೀ ಎಲ್ಲರು ಸೇರಿದ್ದರು ಎಂದರೆ ಸಾಕ್ಷಿಯು ಮಹ್ಮದ್ ಶಪೀ ಬರುತ್ತಿರಲಿಲ್ಲ ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ಮಹ್ಮದ್ ಯಾಕೂಬ್ ಸಾಬ್ ಮತ್ತು ಅನಸೂಚಿ 2 ರ ಆಸ್ತಿಯನ್ನು 1 ನೇ ಪ್ರತಿವಾದಿಗೆ ಮೌಖಿಕ ದಾನದ ರೂಪದಲ್ಲಿ ನೀಡಿರುತ್ತಾರೆ ಎಂದರೆ ಸರಿಯಲ್ಲ. ಈ ಎಲ್ಲಾ ವಿಷಯ ಗೊತ್ತಿದ್ದರೂ ನಾನು ವಾದಿಯರ ಮಾತು ಕೇಳಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

(5 ನೇ ಪ್ರತಿವಾದಿ ಗೈರು ಹಾಜರು ಇದ್ದು ಅವರ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಕಾರಣ ಇಲ್ಲದಿರುವುದರಿಂದ ಸಮಯ ನಿರಾಕರಿಸಿ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಗಿದೆ.)

ಮರು ವಿಚಾರಣೆ ಇಲ್ಲ.

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು ಯಾದಗಿರಿ